ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ,

SRI M. VEERAPPA MOILY.—He may be innocent. But whether it is given after a due investigation?

ಶ್ರೀ ಎ. ಲಕ್ಷ್ಮೀಸಾಗರ್.—ಪಾಲಕರನ್ನು ಕೇಳಿದ್ದಾರೆ.

SRI M. VEERAPPA MOILY.—That may be a part of investigation.

ಶ್ರೀ ಎ. ಲಕ್ಷ್ಮೀಸಾಗರ್.—ಶಾಲೆಯಲ್ಲಿಯೂ ಕೇಳಿದ್ದಾರೆ, ಹುಡುಗಿಯರ ಪೋಷಕರನ್ನು ಕೇಳಿದ್ದಾರೆ. ಆತ ೧೪–೧೫ ವರ್ಷದಿಂದ ಅಲ್ಲಿಯೇ ಇದ್ದಾನೆ. ಆತನ ಮೇಲೆ ಯಾವ ಆಪಾದನೆಯೂ ಇಲ್ಲವೆಂದು ತನಿಖೆಯಿಂದ ತಿಳಿದು ಬಂದಿದೆಯೆಂದು ಹೇಳಿದ್ದಾರೆ.

(ii) ತಾ. ೨-೩-೧೯೮೪ರಂದು ಮೈಸೂರಿನ ಕೆ.ಆರ್. ಮಿಲ್‌ನ ಟೈಂ ಆಫೀಸಿನ ಎದುರು ಇಂಟಕ್ ಯೂನಿಯನ್‌ಗೆ ಸೇರಿದ ಮಹದೇವ ಎನ್ನುವವರ ಮೇಲೆ ಹಲ್ಲೆಯಾಗಿರುವ ಬಗ್ಗೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಅಧ್ಯಕ್ಷರೇ ದಿನಾಂಕ ೨-೩-೧೯೮೪ರ ಬೆಳಿಗ್ಗೆ ೯.೧೫ರಲ್ಲಿ ಮೈಸೂರಿನ ಕೆ.ಆರ್. ಮಿಲ್‌ನ ಟೈಂ ಆಫೀಸಿನ ಎದುರು ೧. ಶ್ರೀ ಗುಡ್ಡೇಕರಿಯ, ೨. ಕಳಸಯ್ಯ, ೩. ವೆಂಕಟೇಶ್, ೪. ನಾಗರಾಜ್ ಮತ್ತು ೫. ತಿಬ್ಬೇಗೌಡ ಎಂಬುವವರು ಇಂಟಕ್ ಯೂನಿಯನ್‌ಗೆ ಸೇರಿದ ಇವರು ಶ್ರೀ ಮಹದೇವ ಎಂಬ ಬಡಗಿಯ ಮೇಲೆ ದಾಳಿ ಬಳಸಿ ಹಲ್ಲೆ ನಡೆಸಿದ್ದಾರೆಂದು, ಇದರಿಂದಾಗಿ ಮಹದೇವ ಅವರಿಗೆ ತೀವ್ರವಾದ ಗಾಯಗಳಾಗಿವೆಯೆಂದು ತಿಳಿದು ಬಂದಿದೆ. ಈ ಸಂಬಂಧದಲ್ಲಿ ಒಂದು ಪ್ರಕರಣವನ್ನು ನಂ. ೫೭/೮೪, ೧೪೫, ೧೪೮, ೩೦೭ರ ರೆಡ್ ವಿತ್ ಭಾರತ ದಂಡ ಸಂಹಿತೆ ಅನ್ವಯ ಮೈಸೂರಿನ ಎನ್. ಆರ್. ಮೊಹಲ್ಲಾ ಠಾಣೆಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ. ಗಾಯಗೊಂಡಿರುವಾತ ಎ.ಐ.ಟಿ.ಯು.ಸಿ.ಗೆ ಸೇರಿದವನಾಗಿದ್ದು, ಶಾಶ್ವತವಾಗಿ ಕೆ.ಆರ್. ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ಆತ ಪರೀಕ್ಷಣೆಯಲ್ಲಿರುವನೆಂದು ತಿಳಿದು ಬಂದಿದೆ. ಈ ಘಟನೆಯಾದ ನಂತರ ಆರೋಪಿಗಳು ಓಡಿ ಹೋದರೆಂದೂ, ಅವರನ್ನು ಹುಡುಕಲು ಸಿಬ್ಬಂದಿಯನ್ನು ನೇಮಿಸಲಾಯಿತೆಂದೂ, ಮತ್ತು ೧೪೪ನೇ ಸೆಕ್ಷನ್ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಪ್ರತಿಬಂಧಕ ಆಜ್ಞೆ ಘೋಷಿಸಲಾಗಿದೆಯೆಂದು ತಿಳಿದು ಬಂದಿದೆ.

ಕೆ. ಆರ್. ಮಿಲ್‌ನಲ್ಲಿ ಆಂತರಿಕ ಸಂಘಗಳಿದ್ದು, ಎಐಟಿಯುಸಿ ಮತ್ತು ಐಎನ್‌ಟಿಯುಸಿ ಕಾರ್ಮಿಕರು ಪರಸ್ಪರ ವಿರೋಧಿಗಳಾಗಿದ್ದರೆಂದು, ೧೯೮೩ರಲ್ಲಿ ೫ ಕ್ರಿಮಿನಲ್ ಪ್ರಕರಣಗಳು ನೋಂದಾಯಿಸಲ್ಪಟ್ಟು, ಐದು ಜನರ ವಿರುದ್ಧ ದೋಷಾರೋಪಣೆ ಪತ್ರವನ್ನು ಹಾಕಲಾಗಿತ್ತೆಂದು ತಿಳಿದು ಬಂದಿದೆ. ಈ ವಿಷಯದಲ್ಲಿ ದಿನಾಂಕ ೪-೧೨-೧೯೮೩ರಂದು ಒಂದು ಪ್ರಕರಣವನ್ನು ಎನ್.ಆರ್. ಮೊಹಲ್ಲಾ ಠಾಣೆಯಲ್ಲಿ ಗುನ್ನೆ ನಂ. ೩೨೭/೮೩, ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೦೭ರ ಅನ್ವಯ ನೋಂದಾಯಿಸಿಕೊಳ್ಳಲಾಗಿತ್ತೆಂದು ಈ ಪ್ರಕರಣದಲ್ಲಿ ಎರಡು ಬಣಗಳು ಸೇರಿದ್ದವೆಂದು, ಇದೇ ವಿಷಯ ಮೈಸೂರಿನ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಮುಂದೆ ವಿಚಾರಣೆಯಲ್ಲಿದೆ ಎಂದು ತಿಳಿದು ಬಂದಿದೆ.

ದಿನಾಂಕ ೨೦-೨-೧೯೮೪ರಂದು ಈ ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀ ಕಳಸಯ್ಯ ಎನ್ನುವವರು ಶ್ರೀ ರಾಮು, ಮಹದೇವ ಮತ್ತು ಆತನ ಸಹೋದರ ಶ್ರೀ ಗೋಪಾಲ ಎಂಬುವರಿಂದ ಹಲ್ಲೆಗೀಡಾಗಿದ್ದನೆಂದೂ, ಈ ಸಂಬಂಧದಲ್ಲಿ ಒಂದು ಪ್ರಕರಣವನ್ನು ಎನ್.ಆರ್. ಮೊಹಲ್ಲಾ ಠಾಣೆಯಲ್ಲಿ ಕ್ರೈಮ್ ನಂ. ೫೦/೮೪, ೩೨೪ ಭಾರತ ದಂಡ ಸಂಹಿತೆ ಅನ್ವಯ ನೋಂದಾಯಿಸಿಕೊಳ್ಳಲಾಗಿತ್ತೆಂದೂ, ದಿನಾಂಕ ೨೧-೨-೧೯೮೪ರಂದು ಈ ಮೂರು ಜನ ಆರೋಪಿಗಳನ್ನು ಬಂಧಿಸಿ, ಜಾಮೀನಿನ ಮೇಲೆ ನ್ಯಾಯಾಲಯ ಬಿಡುಗಡೆ ಮಾಡಿದೆಯೆಂದೂ ತಿಳಿದು ಬಂದಿದೆ. ಈ ವಿಷಯದಲ್ಲೂ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ಗೆ ವರದಿಯನ್ನು ಒಪ್ಪಿಸಲಾಗಿತ್ತೆಂದೂ, ಪೋಲೀಸ್ ಕಾವಲನ್ನು ದಿನಾಂಕ ೨೬-೨-೧೯೮೪ರವರೆವಿಗೂ ಹಾಕಲಾಗಿತ್ತೆಂದೂ ತಿಳಿದು ಬಂದಿದೆ.

ಶ್ರೀ ಮಹದೇವ ಅವರು ಗಾಯಗೊಂಡ ಈ ಪ್ರಕರಣದಲ್ಲಿ ೧. ಶ್ರೀ ಕಳಸಯ್ಯ, ೨. ಗುಡ್ಡೆ ಕರಿಯ ಮತ್ತು ೩. ವೆಂಕಟೇಶ ಅವರನ್ನು ಆಪಾದಿತರನ್ನಾಗಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೦೭ರ ಅನ್ವಯ ಸೇರಿಸಲಾಗಿದ್ದು ಕಾರ್ಯಾಚರಣೆ ನಡೆಯುತ್ತಿದ್ದು, ಪರಿಸ್ಥಿತಿ ಸಧ್ಯದಲ್ಲಿ ಶಾಂತ ವಾಗಿದೆ ಎಂದು ತಿಳಿದು ಬಂದಿದೆ.

ಆಪಾದಿತರಾದ ಗುಡ್ಡೆಕರಿಯ ಮತ್ತು ವೆಂಕಟೇಶ ಇವರನ್ನು ಬಂಧಿಸಲಾಗಿದೆ.

(iii) ಮಂಡಿಕೇರಿ ಸರಕಾರಿ ಹಿರಿಯ ಕಾಲೇಜಿನ ವಿದ್ಯಾರ್ಥಿಗಳ ಚಟುವಟಿಕೆಗಳ ಬಗ್ಗೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಸ್ವಾಮಿ, ಹಾಗೆ ಮಾಡಿಕೇರಿ ಸರ್ಕಾರಿ ಹಿರಿಯ ಕಾಲೇಜಿನ ವಿದ್ಯಾರ್ಥಿಗಳ ಚಟುವಟಿಕೆಗಳ ಬಗ್ಗೆ ಪ್ರಾಸ್ಯ ಸದಸ್ಯರಾದ ಶ್ರೀ ಧನಂಜಯ ಕುಮಾರ್‌ರವರು ಏನು ಪ್ರಸ್ತಾಪ ಮಾಡಿದ್ದರು ಅದಕ್ಕೆ ಹೇಳಿಕೆ ಕೊಡ ಬೇಕಾಗಿದೆ, ಅದನ್ನೂ ಕೂಡ ಈಗಲೇ ಕೊಡುತ್ತೇನೆ.

ಸ್ವಾಮಿ, ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯ ನಂತರ ವಿಜಯಿಯಾದ ಶ್ರೀ ವಿಜೇಂದ್ರನ್ ಅವರ ಗುಂಪು, ಪರಾಜಿತರಾದ ಶ್ರೀ ಸೋಮಣ್ಣ ಹಾಗೂ ಅವರ ಅನುಯಾಯಿಗಳು ಪರಸ್ಪರ ದ್ವೇಷಿಸುತ್ತಿದ್ದರು. ಪರಾಜಿತ ಶ್ರೀ ಸೋಮಣ್ಣನವರ ಗುಂಪು ಕಾಲೇಜಿನ ಕಾರ್ಯಕ್ರಮ ಗಳಲ್ಲಿ ಗಲಭೆ ಎಬ್ಬಿಸುವ ಅಭ್ಯಾಸ ಬೆಳೆಸಿಕೊಂಡರು. ದಿನಾಂಕ ೩೧-೧-೮೪ರಂದು ಕಲಾ ವಿಭಾಗದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಒಂದು ಸಮಾರಂಭ ಏರ್ಪಡಿಸಿದ್ದರು. ಅಂದು ಸೋಮಣ್ಣನವರ ಬೆಂಬಲಿಗರಾದ ಶ್ರೀ ಬೋಪಯ್ಯ ಮತ್ತಿತರರು ಸುಕುಮಾರ್ ಎಂಬುವರೊಡನೆ ಜಗಳ ತೆಗೆದು ಕಾಲೇಜಿನ ಆವರಣದಲ್ಲೇ ಅವರ ಮೇಲೆ ಹಲ್ಲೆ ನಡೆಸಿದರು. ಈ ಸಂಬಂಧದಲ್ಲಿ ಮಡಿಕೇರಿ ಪೋಲೀಸ್ ಠಾಣೆಯಲ್ಲಿ ಅಪರಾಧದ ಕ್ರ.ಸಂ. ೧೩/೮೪ ಕಲಂ ೧೪೩, ೧೪೯, ೩೨೫ ಭಾರತ ದಂಡ ಸಂಹಿತೆ ಪ್ರಕಾರ ಗುನ್ನೆಯೊಂದನ್ನು ನೋಂದಾಯಿಸಲಾಯಿತು. ಅಂದೇ ಅಪರಾಧಿ ವಿದ್ಯಾರ್ಥಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ, ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಈ ವಿದ್ಯಾರ್ಥಿಗಳ ದಸ್ತಗಿರಿಗೆ ಕಾಲೇಜಿನ ಪ್ರಾಚಾರ್ಯರು ಕಾರಣರೆಂದು ಅವರ ಬಳಿಗೆ ಕೆಲವು ವಿದ್ಯಾರ್ಥಿ ಗಳು ಬಂದು ಅವರನ್ನು ಬಿಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ಅವರು ಒಪ್ಪಲಿಲ್ಲ. ಅಂದಿನಿಂದ ಸೋಮಣ್ಣನ ಬೆಂಬಲಿಗರು ಪ್ರಾಚಾರ್ಯರ ಮೇಲೆ ದ್ವೇಷ ಸಾಧಿಸ ತೊಡಗಿದರು. ದಿನಾಂಕ ೧೪-೨-೮೪ರಂದು ಆಷ್ಟೆ ಕುಮಾರ್ ಮತ್ತಿತರ ವಿದ್ಯಾರ್ಥಿಗಳು ಪ್ರಾಚಾರ್ಯರ ಕೊಠಡಿಗೆ ನುಗ್ಗಿ ಚಾಕುವನ್ನು ತೋರಿಸಿ, ಪ್ರಾಚಾರ್ಯರ ಪ್ರಾಣಕ್ಕೆ ಬೆದರಿಕೆ ಹಾಕಿದರು. ಈ ಸಂಬಂಧದಲ್ಲಿ ಪ್ರಾಚಾರ್ಯರ ದೂರಿನ ಮೇರೆಗೆ ಮಡಿಕೇರಿ ಪೋಲೀಸ್ ಠಾಣೆಯಲ್ಲಿ ಅಪರಾಧದ ಕ್ರಮ. ಸಂಖ್ಯೆ ೨೫/೮೪ ಕಲಂ ೪೨೨, ೫೦೬ ಭಾರತ ದಂಡ ಸಂಹಿತೆ ಪ್ರಕಾರ ಗುನ್ನೆ ಯೊಂದನ್ನು ನೋಂದಾಯಿಸಲಾಯಿತು. ದಿನಾಂಕ ೧೫-೨-೮೪ರಂದು ನಡೆದ ಉಪಾಧ್ಯಾಯರ ಪರಿಷತ್ತಿನ ಸಭೆಯಲ್ಲಿ ಎಲ್ಲಾ ಉಪಾಧ್ಯಾಯರು ಎಂಟು ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಗೆ ಹಾಕಬೇಕೆಂದು ಒಮ್ಮತದಿಂದ ನಿರ್ಣಯಿಸಿದರು. ಅದೇ ದಿನ ಅಪರಾಧದ ಕ್ರ.ಸಂ. ೨೫/೮೪ರಲ್ಲಿ ಅಪರಾಧಿಗಳಾದ ಶ್ರೀ ಕುಟ್ಟಪ್ಪ, ಆಷ್ಟೆಕುಮಾರ್, ಬೆಳ್ಳಿಯಪ್ಪ, ಇವರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಪಳಕ್ಕೆ ಒಪ್ಪಿಸಲಾಯಿತು. ದಿನಾಂಕ ೧೬-೩-೮೪ರಂದು ಪ್ರಾಸ್ತೋರ್ವ ವಿದ್ಯಾರ್ಥಿ ಸೋಮಣ್ಣನವರನ್ನು ಬಂಧಿಸಿ ಒಪ್ಪಿಸ ಲಾಯಿತು. ದಿನಾಂಕ ೧೮-೩-೮೪ರಂದು ನ್ಯಾಯಾಂಗದ ಪಳದಲ್ಲಿದ್ದ ಎಲ್ಲ ಅಪರಾಧಿ ವಿದ್ಯಾರ್ಥಿ ಗಳು ತಮ್ಮ ಬಂಧಿಸಿದ ದಿನ ತಮ್ಮ ಮೇಲೆ ಪೋಲೀಸರು ಹಲ್ಲೆ ನಡೆಸಿದರೆಂದು ಆರೋಪಿಸಿದರು. ದಿನಾಂಕ ೧೮-೩-೮೪ರಂದು ಇಬ್ಬರು ವಿದ್ಯಾರ್ಥಿಗಳನ್ನೂ ದಿನಾಂಕ ೨೦-೩-೮೪ರಂದು ಮತ್ತಿಬ್ಬರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ದಿನಾಂಕ ೨೧-೩-೮೪ರಂದು ಕೆಲವು ವಿದ್ಯಾರ್ಥಿನಿಯರು ಸೇರಿದಂತೆ ಸುಮಾರು ೧೫೦ ವಿದ್ಯಾರ್ಥಿ ಗಳು ವಕೀಲರಾದ ಶ್ರೀ ಶಿವಕುಮಾರ ಭೋಪಯ್ಯ ಮತ್ತಿತರರ ನೇತೃತ್ವದಲ್ಲಿ ಮೆರವಣಿಗೆ ಹೊರಟು ಜಿಲ್ಲಾ ಅಧಿಕಾರಿಗಳಿಗೆ, ಪೋಲೀಸರು ತಮ್ಮ ಮೇಲೆ ನಡೆಸಿದ ಹಲ್ಲೆ ಹಾಗೂ ಕಾಲೇಜಿನಿಂದ ಕೆಲವ ರನ್ನು ಹೊರಹಾಕಿದ್ದಕ್ಕೆ ಸಂಬಂಧಿಸಿದಂತೆ ಮನವಿಯನ್ನು ಅರ್ಪಿಸಿದರು.